# ಬಿಂಬಶ್ರೀ ಕಣ್ಣಲ್ಲಿ ನಂಬಿಕೆಯ ನಂದಾದೀಪ

'ರಾಮಾ ರಾಮೇ ರೇ' ಚಿತ್ರದ ಮೂಲಕ ಪ್ರಸಿದ್ಧಿ ಪಡೆದ ಬಿಂಬಶ್ರೀ, ನಂತರ ಕೆಲವು ಸಿನಿಮಾಗಳಲ್ಲಿ ನಟಿಸಿದ್ದರೂ ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಲಿಲ್ಲ. ಸೌಂದರ್ಯದ ಹಂಗುಮೀರಿ ತನ್ನ ಪ್ರತಿಭೆಯ ಬಲದಿಂದಲೇ ನೆಲೆಯೂರುವ ಛಲದಲ್ಲಿರುವ ಅವರು ಸೂಕ್ತ ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾರೆ.

■ ಪದ್ಮನಾಭ ಭಟ್

'ಎಷ್ಟೋ ದೊಡ್ಡ ನಿರ್ದೇಶಕರ ಬಳಿ ಅವಕಾಶ ಗಿಟ್ಟಿಸಿಕೊಳ್ಳಬೇಕು ಅಂದ್ರೆ ಬಕೆಟ್ ಹಿಡೀಬೇಕು... ನಾನು ಬಕೆಟ್ ಹಿಡಿಯುವ ವರ್ಗಕ್ಕೆ ಸೇರಿದವಳಲ್ಲ. ನನಗೆ ಅದೃಷ್ಟ ಇದ್ರೆ, ನಾನು ಅನ್ನ ತಿನ್ನಬೇಕು ಅಂತ ಇದ್ರೆ ಅವಕಾಶಗಳು ಸಿಕ್ಕೇ ಸಿಗುತ್ತವೆ; ಇಲ್ಲಾಂದ್ರೆ ಇಲ್ಲ. ಇಷ್ಟೇ ಇದು' – ತುಸು ಕಹಿಯಾದ ಧ್ವನಿಯಲ್ಲಿಯೇ ಹೇಳಿದರೂ ಅಷ್ಟೇ ನಿಷ್ಠುರತೆಯೂ ಇತ್ತು ಬಿಂಬಶ್ರೀ ನೀನಾಸಮ್ ಅವರ ಧ್ವನಿಯಲ್ಲಿ.

ಹಲವು ವರ್ಷಗಳಿಂದ ಚಂದನವನದಲ್ಲಿ ಗಟ್ಟಿ ನೆಲೆಯೂರಲು ಪ್ರಯತ್ನಿಸುತ್ತಿದ್ದರೂ, ಅದಕ್ಕೆ ಬೇಕಾದ ಪ್ರತಿಭೆ ಇದ್ದರೂ ಎದುರಾಗುತ್ತಿರುವ ತೊಡಕುಗಳು ಅವರನ್ನು ದುರ್ಬಲಗೊಳಿಸಿಲ್ಲ. ವಾಸ್ತವದ ನೆಲದಲ್ಲಿ ಇನ್ನಷ್ಟು ಗಟ್ಟಿಯಾಗಿ ನಿಂತುಕೊಳ್ಳುವಂತೆ ಮಾಡಿವೆ.

ಭದ್ರಾವತಿ ಹುಡುಗಿ ಬಿಂಬಶ್ರೀಗೆ ಬಾಲ್ಯದಲ್ಲಿ ಸಂಗೀತದಲ್ಲಿ ಆಸಕ್ತಿ ಇತ್ತು. ಕರ್ನಾಟಕ ಸಂಗೀತದಲ್ಲಿ ಜ್ಯೂನಿಯರ್ ಅನ್ನೂ ಪಾಸ್ ಮಾಡಿದ್ದರು. ಇದನ್ನು ನೋಡಿಯೇ ಪರಿಚಯದವರೊಬ್ಬರು 'ನೀನು ನೀನಾಸಮ್‌ಗೆ ಹೋಗು. ಒಳ್ಳೆಯ ಅವಕಾಶ ಸಿಗುತ್ತದೆ' ಎಂದು ಸಲಹೆ ನೀಡಿದರು. ಆದರೆ ಆಗ ಅವರಿಗೆ ನಟನೆಯ ಬಗ್ಗೆ ಕಿಂಚಿತ್ ಆಸಕ್ತಿಯಾಗಲಿ, ಕುತೂಹಲವಾಗಲಿ ಇರಲಿಲ್ಲ. ಸಂಗೀತಜ್ಞಾನವೊಂದೇ ಅವರಿಗಿದ್ದ ಪ್ಲಸ್ ಪಾಯಿಂಟ್. ಪಿಯುಸಿ ಕಾಲೇಜಿಗೆ ಅಪ್ಲೈ ಮಾಡುತ್ತಲೇ ನೀನಾಸಮ್‌ಗೂ ಅರ್ಜಿ ಹಾಕಿದ ಅವರು ಆಯ್ಕೆಯೂ ಆಗಿಬಿಟ್ಟರು.

'ಎಸ್ಸೆಸ್ಸೆಲ್ಸಿವರೆಗೂ ಮನೆ, ಶಾಲೆ, ಸಂಗೀತ ಕ್ಲಾಸು ಇಷ್ಟೇ ನನ್ನ ಜಗತ್ತಾಗಿತ್ತು. ಹೊರಜಗತ್ತಿನ ಜ್ಞಾನವೇ ಇರಲಿಲ್ಲ. ನೀನಾಸಮ್ ನನಗೆ ಬೇರೊಂದು ಜಗತ್ತನ್ನು ತೆರೆದಿಟ್ಟಿತು' ಎಂದು ಅವರು ನೆನಪಿಸಿಕೊಳ್ಳುತ್ತಾರೆ.

ನೀನಾಸಮ್ ಕೋರ್ಸ್ ಮುಗಿಸಿ ಬೆಂಗಳೂರಿಗೆ ಬಂದ ಬಿಂಬಶ್ರೀ ಬೆಂಗಳೂರಿನ ರಂಗಭೂಮಿಯಲ್ಲಿ ತೊಡಗಿಕೊಂಡರು. ರಂಗಶಂಕರ, ಮಂಡ್ಯ ರಮೇಶ್ ಅವರ 'ನಟನ', ಯಶವಂತ ಸರದೇಶಪಾಂಡೆ ಅವರ ನಾಟಕ ತಂಡ ಹೀಗೆ ಹಲವು ತಂಡಗಳ ಜೊತೆಗೆ ಕೆಲಸ ಮಾಡಿದರು. ಯಶವಂತ ಸರದೇಶಪಾಂಡೆ ಅವರ ತಂಡದಲ್ಲಿದ್ದಾಗಲೇ ನಟ ಧರ್ಮಣ್ಣ ಪರಿಚಯವಾದರು. ಅವರ ಮೂಲಕ ಡಿ. ಸತ್ಯಪ್ರಕಾಶ್ ನಿರ್ದೇಶಿಸಿದ 'ಜಯನಗರ ಫೋರ್ತ್ ಬ್ಲಾಕ್' ಕಿರುಚಿತ್ರದಲ್ಲಿಯೂ ನಟಿಸಿದರು. ಇದೇ ತಂಡ ಮುಂದೆ 'ರಾಮಾ ರಾಮಾ ರೇ' ಚಿತ್ರ ಮಾಡಿದಾಗ ಅದರಲ್ಲಿಯೂ ಬಿಂಬಶ್ರೀ ಮುಖ್ಯಪಾತ್ರವೊಂದರಲ್ಲಿ ನಟಿಸಿದರು.



'ಬೆಂಗಳೂರಿಗೆ ಬಂದಾಗ ಸಿನಿಮಾಗಳಲ್ಲಿ ನಟಿಸುವ ಆಸೆ ಇತ್ತು. ಆದರೆ ಬಹುಬೇಗನೇ ಚಿತ್ರರಂಗದಲ್ಲಿ ಪ್ರತಿಭೆಯಲ್ಲ, ಸೌಂದರ್ಯವೇ ಮುಖ್ಯ ಎಂದು ಅರಿವಾಯ್ತು. ನಾನು ಇಲ್ಲಿ ನಾಯಕಿಯಾಗಿ ನಟಿಸುವುದು ಸಾಧ್ಯವಿಲ್ಲ ಎಂದು ಗೊತ್ತಾಗಿಹೋಯ್ತು. ನಂತರ ಆ ಪ್ರಯತ್ನವನ್ನು